**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| **ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ** | : | 2076 |
| **ಸದಸ್ಯರ ಹೆಸರು** | : | ಶ್ರೀ ಕೆ.ಪ್ರತಾಪ್ ಸಿಂಹ ನಾಯಕ್ (ವಿಧಾನಸಭಾ ಕ್ಷೇತ್ರದಿಂದ ಚುನಾಯಿತರಾದವರು) |
| **ಉತ್ತರಿಸುವ ದಿನಾಂಕ** | : | 25.03.2026 |
| **ಉತ್ತರಿಸುವ ಸಚಿವರು** | : | ಮೀನುಗಾರಿಕೆ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು. |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ದಕ್ಷಿಣ ಕನ್ನಡ, ಉಡುಪಿ ಹಾಗೂ ಉತ್ತರಕನ್ನಡ ಜಿಲ್ಲಾ ವ್ಯಾಪ್ತಿಯಲ್ಲಿ ರಾಜ್ಯವು ಸುಮಾರು 320 ಕಿ.ಮೀ ಕಡಲ ತೀರ ಪ್ರದೇಶವನ್ನು ಹೊಂದಿದೆ; ಕಡಲ ತೀರ ಅಭಿವೃದ್ಧಿ ನಿಟ್ಟಿನಲ್ಲಿ ಮಾಸ್ಟರ್ ಪ್ಲಾನ್ ಇನ್ನೂ ಅನುಷ್ಠಾನ ಆಗಿಲ್ಲದೇ ಇರುವುದರಿಂದ ಈ ಪ್ರದೇಶದಲ್ಲಿ ಅಭಿವೃದ್ಧಿ ಮರೀಚಿಕೆಯಾಗಿದೆಯೇ; ಉಳಿದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಜ್ಯದ ಸುಮಾರು 320 ಕಿ.ಮೀ. ಉದ್ದದ ಕಡಲ ತೀರದ ಸಮಗ್ರ ಮತ್ತು ವ್ಯವಸ್ಥಿತ ಅಭಿವೃದ್ಧಿಗಾಗಿ ಸರ್ಕಾರವು ಕಾಲಕಾಲಕ್ಕೆ ವೈಜ್ಞಾನಿಕ ಹಾಗೂ ಕಾರ್ಯತಾಂತ್ರಿಕ ಮಾಸ್ಟರ್ ಪ್ಲಾನ್‌ಗಳನ್ನು ರೂಪಿಸಿ ಅನುಷ್ಠಾನಗೊಳಿಸುತ್ತಿದ್ದು, ವಿವರಗಳು ಕೆಳಗಿನಂತಿವೆ:<br><br>1. **ಕರ್ನಾಟಕ ಮ್ಯಾರಿಟೈಮ್ ಪರ್ಸ್ಪೆಕ್ಟಿವ್ ಪ್ಲಾನ್ (Karnataka Maritime Perspective Plan KMPP- 2020):** ರಾಜ್ಯದ ಬಂದರುಗಳ ಮೂಲಸೌಕರ್ಯ ಅಭಿವೃದ್ಧಿ, ಸರಕು ಸಾಗಣೆ ಸಾಮರ್ಥ್ಯ ಹೆಚ್ಚಳ ಮತ್ತು ಕರಾವಳಿ ಆರ್ಥಿಕತೆಯ ದೀರ್ಘಾವಧಿ ಅಭಿವೃದ್ಧಿಗಾಗಿ ಏಪ್ರಿಲ್ 2020 ರಲ್ಲಿ ವಿಸ್ತೃತವಾದ 'ಕರ್ನಾಟಕ ಮ್ಯಾರಿಟೈಮ್ ಪರ್ಸ್ಪೆಕ್ಟಿವ್ ಪ್ಲಾನ್' ಅನ್ನು ಸಿದ್ಧಪಡಿಸಲಾಗಿದ್ದು, ಇದು ಬಂದರು ಅಭಿವೃದ್ಧಿಯ ದಿಕ್ಸೂಚಿಯಾಗಿ ಕಾರ್ಯನಿರ್ವಹಿಸುತ್ತಿದೆ. |
| (ಆ) | ಬಂದಿದ್ದಲ್ಲಿ, ಕಡಲ ತೀರ ಅಭಿವೃದ್ಧಿ ನಿಟ್ಟಿನಲ್ಲಿ ಮಾಸ್ಟರ್ ಪ್ಲಾನ್ ಅನುಷ್ಠಾನ ಮಾಡುವ ಯೋಜನೆ ಪ್ರಸ್ತುತ ಯಾವ ಹಂತದಲ್ಲಿದೆ; | 2. **ಶೋರ್‌ಲೈನ್ ಮ್ಯಾನೇಜ್‌ಮೆಂಟ್ ಪ್ಲ್ಯಾನ್(Shoreline Management Plan - SMP):** ಕಡಲ ತೀರದ ಕೊರೆತ ತಡೆಗಟ್ಟಲು ಮತ್ತು ಸಮಗ್ರ ಕರಾವಳಿ ನಿರ್ವಹಣೆಗಾಗಿ ಸೆಪ್ಟೆಂಬರ್ 2024 ರಲ್ಲಿ ಅತ್ಯಂತ ವೈಜ್ಞಾನಿಕವಾದ 'ಶೋರ್‌ಲೈನ್ ಮ್ಯಾನೇಜ್‌ಮೆಂಟ್ ಪ್ಲ್ಯಾನ್' ವರದಿಯನ್ನು ಸಿದ್ಧಪಡಿಸಲಾಗಿದೆ. ಈ ಯೋಜನೆಯು ಕಡಲ ತೀರದ ಸಂರಕ್ಷಣೆ ಮತ್ತು ಸುಸ್ಥಿರ ಅಭಿವೃದ್ಧಿಗೆ ಮಾಸ್ಟರ್ ಪ್ಲ್ಯಾನ್ ಆಗಿ ಕಾರ್ಯನಿರ್ವಹಿಸುತ್ತಿದ್ದು, ಮಂಡಳಿಯಿಂದ ನೇಮಕಗೊಂಡ ಸಮಾಲೋಚಕರು ಸಮುದ್ರ ಕೊರೆತ ಬಾಧಿತ ಪ್ರದೇಶಗಳಿಗೆ ಭೇಟಿ ನೀಡಿ ಅಗತ್ಯವಿರುವ ಪೂರ್ವಭಾವಿ ಅಧ್ಯಯನಗಳನ್ನು ಕೈಗೊಂಡು ಪ್ರಸುತ್ತ ಕರಡು ವಿಸ್ತೃತ ಯೋಜನಾ ವರದಿಯನ್ನು ಸಲ್ಲಿಸಿದ್ದು, ಅಂದಾಜು ಪಟ್ಟಿಯು ತಯಾರಿಕೆ ಹಂತದಲ್ಲಿರುತ್ತದೆ. ತೀವ್ರ ಸಮುದ್ರ ಕೊರೆತವಿರುವ ಪ್ರದೇಶಗಳಲ್ಲಿ ಹಂತ-ಹಂತವಾಗಿ ಕಾಮಗಾರಿಗಳನ್ನು ಕೈಗೆತ್ತಿಕೊಳ್ಳುವ ಪ್ರಕ್ರಿಯೆ ಚಾಲನೆಯಲ್ಲಿದೆ.<br><br>3. **ಕರ್ನಾಟಕ ಜಲಸಾರಿಗೆ ಅಭಿವೃದ್ಧಿ ನೀತಿ-2024:** ಮೆರಿಟೈಮ್ ಕ್ಷೇತ್ರದಲ್ಲಿ ಬೃಹತ್ ಬಂಡವಾಳ ಹೂಡಿಕೆಯನ್ನು ಆಕರ್ಷಿಸಲು ಮತ್ತು ಆಧುನಿಕ ಮೂಲಸೌಕರ್ಯಗಳನ್ನು ಸೃಜಿಸಲು ದಿನಾಂಕ:04.01.2025 ರಂದು ನೂತನ ಕರ್ನಾಟಕ ಜಲಸಾರಿಗೆ ಅಭಿವೃದ್ಧಿ ನೀತಿ-2024ರನ್ನು ಜಾರಿಗೆ ತರಲಾಗಿದೆ.<br><br>ಮೇಲಿನ ಎಲ್ಲಾ ಯೋಜನೆಗಳು ಹಾಗೂ ನೀತಿಗಳು ಒಟ್ಟಾರೆಯಾಗಿ ಕರಾವಳಿ ಅಭಿವೃದ್ಧಿಯ 'ಮಾಸ್ಟರ್ ಪ್ಲ್ಯಾನ್' ನ ಭಾಗಗಳಾಗಿದ್ದು, ಅನುಷ್ಠಾನದ ವಿವಿಧ ಹಂತಗಳಲ್ಲಿವೆ. |

| | | |
|---|---|---|
| (ಇ) | ವಿದೇಶಿ ಐಶಾರಾಮಿ ಹಡಗುಗಳು ಆಗಮಿಸುವ ರಾಜ್ಯದ ಏಕೈಕ ಬಂದರು ನವಮಂಗಳೂರು ಬಂದರು ಪ್ರಾಧಿಕಾರವಾಗಿದೆ; ಇಲ್ಲಿ ಸಾಕಷ್ಟು ಮೂಲಭೂತ ಸೌಲಭ್ಯಗಳ ಕೊರತೆ ಇದ್ದು, ಅವಶ್ಯ ಸೌಲಭ್ಯಗಳನ್ನು ಕಲ್ಪಿಸುವ ನಿಟ್ಟಿನಲ್ಲಿ ಸರ್ಕಾರ ಇದುವರೆಗೆ ಯಾವುದೇ ಕ್ರಮ ವಹಿಸದೇ ಇರಲು ಕಾರಣವೇನು; | ನವಮಂಗಳೂರು ಬಂದರು ಪ್ರಾಧಿಕಾರವು ಕೇಂದ್ರ ಸರ್ಕಾರದ ಅಧೀನದಲ್ಲಿ ಕಾರ್ಯನಿರ್ವಹಿಸುತ್ತಿದ್ದು, ರಾಜ್ಯ ಸರ್ಕಾರದ ವ್ಯಾಪ್ತಿಗೆ ಬರುವುದಿಲ್ಲ. |
| (ಈ) | ಯಾವ ಕಾಲಮಿತಿಯೊಳಗೆ ಕಡಲ ತೀರ ಅಭಿವೃದ್ಧಿ ನಿಟ್ಟಿನಲ್ಲಿ ಮಾಸ್ಟರ್ ಪ್ಲಾನ್ ಅನ್ನು ಸಂಪೂರ್ಣವಾಗಿ ಅನುಷ್ಠಾನಕ್ಕೆ ತರಲಾಗುವುದು ಹಾಗೂ ಮೂಲಭೂತ ಸೌಲಭ್ಯಗಳ ಕೊರತೆ ನೀಗಿಸಲು ಅಗತ್ಯ ಕ್ರಮ ಕೈಗೊಳ್ಳಲಾಗುವುದು? | ಕರಾವಳಿ ಅಭಿವೃದ್ಧಿಯ ಮಾಸ್ಟರ್ ಪ್ಲ್ಯಾನ್‌ಗಳನ್ನು ಅತ್ಯಂತ ವೈಜ್ಞಾನಿಕವಾಗಿ ಮತ್ತು ವ್ಯವಸ್ಥಿತವಾಗಿ ಅನುಷ್ಠಾನಕ್ಕೆ ತರಲು ಕಾಲಬದ್ಧ ಕ್ರಿಯಾಯೋಜನೆಯನ್ನು (Time-bound Action Plan) ರೂಪಿಸಿದ್ದು, ಈ ನಿಟ್ಟಿನಲ್ಲಿ ಕೈಗೊಂಡಿರುವ ಕ್ರಮಗಳು ಕೆಳಗಿನಂತಿವೆ:<br><br>**1.** ಕಡಲ ತೀರದ ಅಭಿವೃದ್ಧಿಯು ಬೃಹತ್ ಹೂಡಿಕೆ ಮತ್ತು ತಾಂತ್ರಿಕ ಸವಾಲುಗಳನ್ನು ಒಳಗೊಂಡಿರುತ್ತದೆ. 'ಶೋರ್‌ಲೈನ್ ಮ್ಯಾನೇಜ್‌ಮೆಂಟ್ ಪ್ಲ್ಯಾನ್' (SMP-2024) ಅಡಿಯಲ್ಲಿ ಅತ್ಯಂತ ತುರ್ತಾಗಿ ರಕ್ಷಣೆ ಬೇಕಿರುವ High Erosion ವಲಯಗಳನ್ನು ಗುರುತಿಸಲಾಗಿದೆ. ಈ ವಲಯಗಳಲ್ಲಿ ಮುಂದಿನ 2 ರಿಂದ 3 ವರ್ಷಗಳ ಅಲ್ಪಾವಧಿಯಲ್ಲಿ ಆದ್ಯತೆಯ ಮೇಲೆ ಸಂರಕ್ಷಣಾ ಕಾಮಗಾರಿಗಳನ್ನು ಪೂರ್ಣಗೊಳಿಸಲು ಕ್ರಮ ವಹಿಸಲಾಗುವುದು.<br><br>**2.** 'ಕರ್ನಾಟಕ ಮ್ಯಾರಿಟೈಮ್ ಪರ್ಸ್ಪೆಕ್ಟಿವ್ ಪ್ಲಾನ್' (KMPP) ಅನ್ವಯ, ಬಂದರುಗಳಲ್ಲಿನ ಮೂಲಸೌಕರ್ಯ ಕೊರತೆಯನ್ನು ನೀಗಿಸಲು ಕೇಂದ್ರ ಸರ್ಕಾರದ 'ಸಾಗರಮಾಲಾ' ಯೋಜನೆ ಹಾಗೂ ರಾಜ್ಯದ ಅನುದಾನದಡಿ ಸಮಗ್ರ ಕ್ರಿಯಾಯೋಜನೆಯನ್ನು ಹಮ್ಮಿಕೊಳ್ಳಲಾಗಿದೆ ಹಾಗೂ ರಾಜ್ಯದ ಪ್ರಮುಖ ಬಂದರುಗಳನ್ನು ವಿಶ್ವದರ್ಜೆಯ ಸೌಲಭ್ಯಗಳೊಂದಿಗೆ ಸಜ್ಜುಗೊಳಿಸುವ ಗುರಿ ಹೊಂದಲಾಗಿದೆ.<br><br>**3.** ಖಾಸಗಿ ಹೂಡಿಕೆಗೆ ಉತ್ತೇಜನ: 'ಕರ್ನಾಟಕ ಜಲಸಾರಿಗೆ ಅಭಿವೃದ್ಧಿ ನೀತಿ-2024' ರ ಅಡಿಯಲ್ಲಿ, ಸಾರ್ವಜನಿಕ-ಖಾಸಗಿ ಸಹಭಾಗಿತ್ವದ (PPP) ಮೂಲಕ ಬೃಹತ್ ಮೂಲಸೌಕರ್ಯ ಯೋಜನೆಗಳನ್ನು ತ್ವರಿತವಾಗಿ ಪೂರ್ಣಗೊಳಿಸಲು ಏಕಗವಾಕ್ಷಿ ಅನುಮೋದನೆ ಮತ್ತು ಆರ್ಥಿಕ ಸವಲತ್ತುಗಳನ್ನು ಪಡೆದು ನಿಗದಿತ ಅವಧಿಯೊಳಗೆ ಅನುಷ್ಠಾನಗೊಳಿಸಲು ಕ್ರಮ ವಹಿಸಲಾಗುತ್ತಿದೆ. |

**IDD 25 PSP 2026**

**(ಮಂಕಾಳ ಎಸ್. ವೈದ್ಯ)**
**ಮೀನುಗಾರಿಕೆ, ಬಂದರು ಮತ್ತು**
**ಒಳನಾಡು ಜಲಸಾರಿಗೆ ಸಚಿವರು**